**<u>ದಿನಾಂಕಃ 01/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಂ.ಪಿ. ವಕೀಲರಿಂದಃ</u>**

1. ಮುತ್ತೂರು ಗ್ರಾಮದಲ್ಲಿ ನಾನು ಸುಮಾರು 50 ವರ್ಷದಿಂದ ವಾಸಮಾಡುತ್ತಿದ್ದೇನೆ. ನಾನು ನನ್ನ ಪ್ರಮಾಣಪತ್ರದಲ್ಲಿ 46 ವರ್ಷ ವಯಸ್ಸು ಎಂದು ಬರೆಸಿದ್ದೇನೆ ಎಂದರೆ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಮುತ್ತೂರು ಕೊಪ್ಪಲಲ್ಲಿ ಮನೆ ಇದೆ ಅಲ್ಲಿ ವಾಸಮಾಡುತ್ತಿದ್ದೇನೆ. ನಾನು ಹುಟ್ಟಿದಾಗಿನಿಂದಲೂ ಅಲ್ಲಿ ವಾಸ ಮಾಡುತ್ತಿದ್ದೇನೆ. ನಾನು ವಾಸಮಾಡುತ್ತಿರುವ ಮನೆಯ ಸ್ವತ್ತಿನ ನಂಬರ್, ಜಂಜರ್ ನಂಬರ್, ಅಸ್ಸೆಮೆಂಟ್ ನಂಬರ್, ಡಿಮಾಂಡ್ ನಂಬರ್ ಗೊತ್ತಿಲ್ಲ, ಆದರೆ ಕಂದಾಯ ಕಟ್ಟುತ್ತಿದ್ದೇನೆ. ನಾನು ವಾಸಿಸುತ್ತಿರುವ ಮನೆ ನನ್ನ ತಂದೆಯ ಹೆಸರಿನಲ್ಲಿದೆ. ನನ್ನ ತಾಯಿ ತೀರಿಕೊಂಡಿದ್ದಾರೆ.

2. ರಾಜಶೇಖರ ಮತ್ತು ಪ್ರೇಮ ಅವರ ಹೊಲದ ಹತ್ತಿರ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಸುಮಾರು 15 ವರ್ಷಗಳ ಹಿಂದೆ ಅವರು ಆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಅವರ ಮನೆಯ ದಾಖಲಾತಿಗಳು ರಾಜಶೇಖರ ಮತ್ತು ಪ್ರೇಮ ರವರ ಹೆಸರಿನಲ್ಲಿವೆ. 1 ನೇ ಪ್ರತಿವಾದಿ ಮರಣ ಹೊಂದಿರುತ್ತಾರೆ.

3. ನಾನು ವಾಸಿಸುತ್ತಿರುವ ಮನೆಯನ್ನು ದಾವಾ ಷೆಡ್ಯೂಲ್ ನಲ್ಲಿ ಸೇರಿಸಿದ್ದೇನೆ. ಸುಮಾರು 15 ವರ್ಷಗಳಿಂದ ನಾನು ಹಾಗೂ ಪ್ರತಿವಾದಿಗಳು ಬೇರೆಬೇರೆ ಮನೆಯಲ್ಲಿ ವಾಸಿಸುತ್ತಿದ್ದೇನೆ. ನಾವು ಬೇರೆ ಬೇರೆ ಮನೆಯಲ್ಲಿ ವಾಸಿಸುತ್ತಿದ್ದರೂ ವ್ಯವಹಾರ ಒಂದೇ ಇತ್ತು. 1 ನೇ ಪ್ರತಿವಾದಿ ಮನೆಯನ್ನು ಕಟ್ಟಲು ಸಾಲವನ್ನು ತೆಗೆದುಕೊಂಡಿದ್ದು, ಯಾವ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮನೆಯು ಅವರ ಹೆಸರಿನಲ್ಲಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅವರ ಮನೆಯ ಡಿಮಾಂಡ್ ರಿಜಿಸ್ಟರ್ ನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅವರ ಮನೆಯ ಜಂಜರ್ ನಂಬರ್, ಡಿಮಾಂಡ್ ನಂಬರ್, ಸ್ವತ್ತಿನ ನಂಬರ್, ಅಸೆಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮಗ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಸುಮಾರು 12–13 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಪ್ರತಿವಾದಿಗಳ ಮಗನ ಸಂಪಾದನೆಯಲ್ಲಿ ಅವರು ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ.

4. ನಾನು ನ್ಯಾಯಾಲಯದ ಮುಂದೆ ರೇಷನ್ ಕಾರ್ಡ್ ಹಾಜರುಪಡಿಸಿಲ್ಲ. ರೇಷನ್ ಕಾರ್ಡ್ ಸುಮಾರು 25 ವರ್ಷಗಳಿಂದ ನನ್ನ ಹೆಸರಿನಲ್ಲಿದೆ. ರೇಷನ್ ಕಾರ್ಡ್ ನನ್ನ, ನನ್ನ ತಾಯಿ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿದೆ. ಆ ರೇಷನ್ ಕಾರ್ಡ್ ನಲ್ಲಿ ಪ್ರತಿವಾದಿಗಳ ಹಾಗೂ ಅವರ ಮಗನ ಹೆಸರು ಇಲ್ಲ.

5. ಸರ್ವೆ ನಂಬರ್ 67/13, 67/11, 67/ಪಿ2, ನಮ್ಮ ಪಿತ್ರಾರ್ಜಿತ ಸ್ವತ್ತು. ಸರ್ವೆ ನಂಬರ್ 67/13 ರಲ್ಲಿ 4 ಎಕರೆ ಜಮೀನು ಇದೆ. ಈ ಜಮೀನು ಮೂಲತಃ ನನ್ನ ತಾಯಿಯ ತಂದೆಗೆ ಸೇರಿದ್ದು. ನನ್ನ ತಾಯಿಯ ತಂದೆಗೆ ಸರ್ಕಾರದಿಂದ

ಮಂಜೂರಾದಂತಹ ಸ್ವತ್ತು. ಯಾವ ಇಸವಿಯಲ್ಲಿ ಮಂಜೂರಾಗಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಹುಟ್ಟುವುದಕ್ಕಿಂತ ಮುಂಚೆ ಮಂಜೂರಾಗಿತ್ತು. ನಾನು ವಾಸಿಸುವ ಮನೆಗೆ ಸಂಬಂಧಪಟ್ಟಂತೆ ನನ್ನ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಚುನಾವಣಾ ಗುರುತಿನ ಚೀಟಿ ಇವೆ. ನಾನು ಇರುವ ಮನೆಗೆ ಸಂಬಂಧಿಸಿದಂತೆ ಪ್ರತಿವಾದಿಗಳ ಹಾಗೂ ಅವರ ಮಗನ ಹೆಸರಿನಲ್ಲಿ ಚುನಾವಣಾ ಗುರುತಿನ ಚೀಟಿ ಇಲ್ಲ. ಸುಮಾರು 30 ವರ್ಷದಿಂದ ನನ್ನ ಹೆಸರಿನಲ್ಲಿ ಚುನಾವಣಾ ಗುರುತಿನ ಚೀಟಿ ಇದೆ, ಹಾಗೂ ಸುಮಾರು 20 ವರ್ಷದಿಂದ ನನ್ನ ಹೆಂಡತಿಯ ಹೆಸರಿನಲ್ಲಿ ಚುನಾವಣಾ ಗುರುತಿನ ಚೀಟಿ ಇದೆ.

6. ದಾವಾ ಷೆಡ್ಯೂಲ್ ಸ್ವತ್ತಿನ ಐಟಂ ನಂ.1 ಮತ್ತು 3, 2 ನೇ ಪ್ರತಿವಾದಿಯ ಹೆಸರಿನಲ್ಲಿವೆ. ದಾವಾ ಐಟಂ ನಂ.1 ಸ್ವತ್ತನ್ನು ನಾವು ಕೊಂಡುಕೊಂಡಿದ್ದು. ದಾವಾ ಐಟಂ ನಂ.3 ನನ್ನ ತಾಯಿಯ ತಂದೆಯ ಜಮೀನು. ನಾನು ಚಿಕ್ಕವನಿದ್ದಾಗ ದಾವಾ ಐಟಂ ನಂ.1 ಮತ್ತು 3 ನೇ ಸ್ವತ್ತನ್ನು 2 ನೇ ಪ್ರತಿವಾದಿ ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ. ಹೇಗೆ ಮಾಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಐಟಂ ನಂ.1 ಸ್ವತ್ತನ್ನು ಸಣ್ಣಮ್ಮ ರವರಿಂದ ಸುಮಾರು 20 ವರ್ಷಗಳ ಹಿಂದೆ ಒಂದು ಲಕ್ಷ ರೂಪಾಯಿಗೆ ಖರೀದಿಸಿರುತ್ತೇವೆ. ನಾನು ಆ ಕ್ರಯಪತ್ರವನ್ನು ನೋಡಿಲ್ಲ. ಕ್ರಯಪತ್ರವನ್ನು ಬರೆಸುವಾಗ ನಾನು ಹಾಜರಿರಲಿಲ್ಲ. ಸದರಿ ಕ್ರಯಪತ್ರಕ್ಕೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಅದರ ಬಿಕ್ಲಂ ಯಾರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬರೆದಿರುವ ಚಕ್ಕುಬಂದಿ ನನಗೆ ಗೊತ್ತಿಲ್ಲ. ಅದು ಯಾವ ತಾರೀಖು, ತಿಂಗಳು ಮತ್ತು ಇಸವಿಯಲ್ಲಿ ನೊಂದಣಿಯಾಯಿತು ಎಂದು ನನಗೆ ಗೊತ್ತಿಲ್ಲ. ಸಣ್ಣಮ್ಮ ರವರು ತಮ್ಮ ಮಕ್ಕಳ ಮದುವೆಗಾಗಿ ಅದನ್ನು ಮಾರಾಟ ಮಾಡಿದ್ದರು. ಈ ಜಮೀನನ್ನು ಪ್ರೇಮಾರವರು ನಮ್ಮ ದುಡ್ಡಿನಲ್ಲಾಗಲೀ, ರಾಜಶೇಖರವರ ಹಣದಲ್ಲಾಗಲೀ ಕೊಂಡುಕೊಂಡಿಲ್ಲ, ಈ ಸ್ವತ್ತನ್ನು ಅವರ ತಾಯಿಯ ಮನೆಯಿಂದ ಬಂದಂತಹ ಚಿನ್ನ ಮತ್ತು ಒಡವೆಗಳ ಬಳುವಳಿಗಳಿಂದ ಹಾಗೂ ಚಿನ್ನವನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ಈ ಸ್ವತ್ತನ್ನು ಖರೀದಿಸಿದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ಒಟ್ಟು ಕುಟುಂಬದ ಆದಾಯದಿಂದ ಹಾಗೂ ಜೋಳ ಮಾರಿದ ದುಡ್ಡಿನಿಂದ ಕೊಂಡುಕೊಂಡಿದ್ದು ಎಂದು

ನುಡಿಯುತ್ತಾರೆ. ಕ್ರಯಪತ್ರವನ್ನು ಬರೆಸುವಾಗ ಪ್ರೇಮಾ ರವರ ಹೆಸರಿಗೆ ಬರೆಸಬೇಡಿ ಎಂದು ನಾನು ಆಕ್ಷೇಪಿಸಿಲ್ಲ. ಸಾಕ್ಷಿಯು ಸ್ವತಃ ಅವರು ನನಗಿಂತಲೂ ದೊಡ್ಡವರಿದ್ದ ಕಾರಣ ನಾನು ಅವರೇ ನನಗೆ ಖಾತೆ ಮಾಡಿಸಿಕೊಡುತ್ತಾರೆಂದು ಸುಮ್ಮನಿದ್ದೆ ಎಂದು ನುಡಿಯುತ್ತಾರೆ. ನಾವು ಸದರಿ ಕ್ರಯಪತ್ರದಲ್ಲಿ ಜೋಳ ಮತ್ತು ರಾಗಿಯನ್ನು ಮಾರಿದ ಒಟ್ಟು ಕುಟುಂಬದ ಹಣದಿಂದ ಈ ಸ್ವತ್ತುಗಳನ್ನು ಖರೀದಿಸುತ್ತಿದ್ದೇವೆ ಎಂದು ಹೇಳಿ ಬರೆಸಿಲ್ಲ. ಕ್ರಯಪತ್ರದ ಸಮಯಕ್ಕೆ ನನಗೆ 28 ವರ್ಷ ವಯಸ್ಸಾಗಿತ್ತು. 28 ವರ್ಷಗಳ ಹಿಂದೆ ನಾನು ಹಾಗೂ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸಿಸುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಆ ಸಮಯಕ್ಕೆ ನಾನು ನಮ್ಮ ಒಟ್ಟುಕುಟುಂಬದ ಆದಾಯ ಎಷ್ಟು ಮತ್ತು ಖರ್ಚು ಎಷ್ಟು ಎಂದು ಯಾವುದೇ ಪುಸ್ತಕದಲ್ಲಿ ಬರೆದಿಲ್ಲ. ಕ್ರಯಕ್ಕೆ ಜಮೀನನ್ನು ಕೊಂಡುಕೊಳ್ಳುವ ಸಮಯಕ್ಕೆ ನನ್ನ ತಂದೆ ಮರಣ ಹೊಂದಿದ್ದರು, ನನ್ನ ತಾಯಿ ಜೀವಂತ ಇದ್ದರು. ಆ ಸಮಯಕ್ಕೆ ಮನೆಯ ವ್ಯವಹಾರವನ್ನು ನನ್ನ ಅಣ್ಣ ಮಾಡುತ್ತಿದ್ದರು.ಅವರು ಮನೆಯ ವ್ಯವಹಾರ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ.

7. ದಾವಾ ಐಟಂ ನಂ.1 ನ್ನು ಕೊಂಡುಕೊಳ್ಳುವ ಸಮಯಕ್ಕೆ ದಾವಾ ಐಟಂ ನಂ. 2 ನೇ ಸ್ವತ್ತು ನನ್ನ ತಾಯಿಯ ಹೆಸರಿನಲ್ಲಿ ಇತ್ತು. ನನ್ನ ಅಣ್ಣ ದಾವಾ ಐಟಂ ನಂ.1 ನೇ ಸ್ವತ್ತನ್ನು ಕೊಂಡುಕೊಳ್ಳುವ ಸಮಯಕ್ಕೆ ಯಾವುದೇ ಸಾಲವನ್ನು ಪಡೆದಿಲ್ಲ. ನಾನು ನನ್ನ ಅಣ್ಣ ಒಟ್ಟಿಗೆ ಹೊಲದಲ್ಲಿ ದುಡಿಯುತ್ತಿದ್ದೆವು. ಮನೆಯ ವ್ಯವಹಾರ ನನ್ನ ಅಣ್ಣ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

8. ದಾವಾ ಐಟಂ ನಂ.2 ನನ್ನ ಹಾಗೂ ನನ್ನ ಅಣ್ಣನ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವ ಐಟಂ ನಂ.3 ನೇ ಸ್ವತ್ತು ನನ್ನ ತಾಯಿ ಮತ್ತು ತಂದೆ ಕಾಡನ್ನು ಕಡಿದು ವ್ಯವಸಾಯ ಮಾಡುತ್ತಿದ್ದರು, ನಂತರ 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ದಾವಾ ಐಟಂ ನಂ.3 ರ ಖಾತೆ ನನ್ನ ಅಣ್ಣ ಹಾಗೂ ಪ್ರೇಮಾ ರವರ ಹೆಸರಿನಲ್ಲಿದೆ. ದಾವಾ ಐಟಂ ನಂ.3 ನನ್ನ ತಾಯಿಯ ತಾಯಿಗೆ ಬಂದಂತಹ ಸ್ವತ್ತು. ಅದನ್ನು 1 ನೇ ಪ್ರತಿವಾದಿ ತನ್ನ

ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ನನ್ನ ಅಜ್ಜಿ ತೀರಿಕೊಂಡ ನಂತರ 1 ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ಐಟಂ ನಂ.3 ರ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಆ ರೀತಿ ಖಾತೆ ಮಾಡಿಸಿಕೊಂಡು 30 ವರ್ಷ ಕಳೆದಿದೆ. ಈಗ ನನ್ನ ಅಜ್ಜಿ ಮತ್ತು ತಾಯಿ ಮೃತರಾಗಿದ್ದಾರೆ. ನನ್ನ ತಂದೆ ತಾಯಿ ಕಾಡು ಕಡಿದು ವ್ಯವಸಾಯ ಮಾಡುತ್ತಿದ್ದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ದಾವಾ ಐಟಂ ನಂ.3 ರ ಸ್ವತ್ತು ಪ್ರತಿವಾದಿಗಳಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಸೇರಿದ ಸ್ವತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**